No.MAG(3)/NPP/98/2023-2024

No.MAG(3)/NPP/99/2023-2024





ಸ್ಥಾಪನೆ : ೧೯೭೯

# ಹೊಂಗನಸು

ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು-೧೧೪

ಸಂಪುಟ: ೧೩ ಸಂಚಿಕೆ: ೩ | ಜೂನ್ ೨೦೨೫ | ಪುಟಗಳು-೮ | ವಾರ್ಷಿಕ ಚಂದಾ ರೂ.೨೦/- | ಶ್ರೀ ವಿಶ್ವಾವಸು ಸಂವತ್ಸರ
Volume: 13 Issue: 3 | June 2025 | Pages-8 | Annual Subscription Rs.20/- | ವೈಶಾಖ-ಜೇಷ್ಠ ಮಾಸ

ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**

**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೩೨೮೧೨೧೨೩
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

**ದಿ। ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕರು
**ಡಾ. ಆರ್. ಲಕ್ಷ್ಮೀನಾರಾಯಣ**
ಗೌರವಾಧ್ಯಕ್ಷರು

**ಪದಾಧಿಕಾರಿಗಳು**
❖ ಅಧ್ಯಕ್ಷ
**ಡಾ. ಬೈರಮಂಗಲ ರಾಮೇಗೌಡ**
೯೩೪೧೨೫೮೧೪೨
❖ ಗೌರವ ಕಾರ್ಯದರ್ಶಿ
**ಡಾ. ಶಾಂತರಾಜು**
೯೯೮೦೪೮೧೪೮೪
❖ ಗೌರವ ಕೋಶಾಧಿಕಾರಿ
**ಚಂದ್ರಶೇಖರ ನಾದೂರು**
೯೯೪೫೦೦೪೮೪೬

**ಸಂರಕ್ಷರು**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ

**ಸಂಯೋಜಕರು**
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ

**ಸಂನುಡಿ**

## ಭಾಷಾ ಶಿಕ್ಷಣ ಎತ್ತ ಸಾಗುತ್ತಿದೆ?

ಮಾನವನ ಸರ್ವತೋಮುಖ ಬೆಳವಣಿಗೆಯಲ್ಲಿ ಭಾಷೆ ಅತ್ಯಂತ ಮುಖ್ಯವಾದದ್ದು. ಭಾಷೆಗಳ ಬೆಳವಣಿಗೆಯಲ್ಲಿ, ಅದಕ್ಕಿಂತ ಹೆಚ್ಚಾಗಿ ಬಳಕೆಯಲ್ಲಿ ಕಾಲ ಕಳೆದಂತೆ ಬದಲಾವಣೆಗಳು ಅನಿವಾರ್ಯ. ಇದಕ್ಕೆ ಕನ್ನಡ ಭಾಷೆಯೇನೂ ಹೊರತಲ್ಲ.

ಶಿಲಾಶಾಸನ, ತಾಳೆಗರಿ, ನಂತರ ಹಾಳೆಗಳು, ಮತ್ತೀಗ ಡಿಜಟಲೀಕರಣ ಇವೆಲ್ಲ ಒಂದು ಕಡೆಯಾದರೆ, ಮತ್ತೊಂದೆಡೆ ಭಾಷಾ ಬಳಕೆಯಲ್ಲಿನ ಸರಳೀಕರಣ ಭಾಷೆಗೆ ಅನೇಕ ರೂಪಗಳನ್ನು ಕೊಟ್ಟಿದೆ. ಶಿಕ್ಷಣ ಕ್ಷೇತ್ರದಲ್ಲೂ ಈ ಬದಲಾವಣೆ ಪರಿಣಾಮ ಬೀರಿದೆ. ಭಾಷೆಯ ಕಲಿಕೆಯಲ್ಲಿ ಬುಡವೇ ಶಿಥಿಲವಾಗಿದೆಯೇನೋ ಎಂದು ಕೆಲವು ಬಾರಿ ಅನ್ನಿಸುತ್ತದೆ.

ಹಿಂದಿದ್ದ ಹಳಗನ್ನಡ ವರ್ಚಸ್ಸು ಈಗಲೂ ಇದ್ದರೂ ಕೆಲವು ವಿಶ್ವವಿದ್ಯಾಲಯಗಳಲ್ಲಿ ಕತ್ತರಿ ಪ್ರಯೋಗಕ್ಕೆ ಗುರಿಯಾಗಿರುವುದುಂಟು. ಇದು ಭಾಷೆಯ ತಪ್ಪಲ್ಲ. ಬಹುಶಃ ಇದಕ್ಕೆ ಸಮರ್ಪಕವಾಗಿ ಕಲಿಸುವ ಆಸಕ್ತಿ ಉಳ್ಳವರ ಅಲಭ್ಯತೆ ಕಾರಣವಿರಬಹುದು. 'ಅಲ್ಲಲ್ಲಿ ಚದುರಿದಂತೆ ಮಳೆ' ಅನ್ನುವಂತೆ ಕೆಲವು ಆಸಕ್ತ ಸಂಸ್ಥೆಗಳು ಹಿರಿಯ, ನುರಿತ ವಿದ್ವನ್ಮಣಿಗಳ ನೆರವಿನಿಂದ ಹಳಗನ್ನಡ ತರಬೇತಿ ನಡೆಸುವಲ್ಲಿ ತೊಡಗಿ ಅದನ್ನು ಜೀವಂತವಾಗಿ ಇರಿಸಿವೆ.

ಇನ್ನೊಂದು ಕಡೆ, ಯಾವುದೇ ವಿಶ್ವವಿದ್ಯಾಲಯ ಅಥವಾ ಅದರ ಅಂಗವಾದ ಸ್ನಾತಕೋತ್ತರ ಕೇಂದ್ರಗಳು ಪ್ರಾರಂಭವಾಗುವಾಗ ಇಂಗ್ಲಿಷ್ ಮತ್ತು ಕನ್ನಡ ಭಾಷೆಯಿಂದ ಪ್ರಥಮ ಹೆಜ್ಜೆ ಇಡುತ್ತವೆ. ಹೊರನೋಟಕ್ಕೆ ಪ್ರಾಂತೀಯ ಭಾಷೆಗೆ ಪ್ರಾಮುಖ್ಯತೆ ಅನಿಸಿದರೂ, ಒಳಗಿನ ಕಾರಣವೇ ಬೇರೆ. ಇಂತಹ ಕಲಿಕೆಗೆ ಒಂದು ವಿಶಾಲವಾದ ಕೋಣೆ, ಕೆಲವು ಬೆಂಚುಗಳು ಇದ್ದರೆ ಸಾಕು, ಒಬ್ಬ ಅಧ್ಯಾಪಕನನ್ನು ನೇಮಿಸಿ ಕಡಿಮೆ ಖರ್ಚಿನಲ್ಲಿ ಅತಿಥಿ ಉಪನ್ಯಾಸಕರ ಸಹಾಯದಿಂದ ನಡೆಸಬಹುದು ಎಂದು.

ಈ ಹಿಂದೆ ಬ್ರಿಟಿಷರ ಕಾಲದಲ್ಲಿನ ಪರಿಸ್ಥಿತಿಯೇ ಬೇರೆ ಇತ್ತು. ಬಿ.ಎಂ.ಶ್ರೀ. ಅವರು ಸ್ನಾತಕೋತ್ತರ ಕನ್ನಡ ವಿಭಾಗ ಪ್ರಾರಂಭವಾಗಲಿ ಎಂದಾಗ ನುರಿತ ಕನ್ನಡ ಪ್ರಾಧ್ಯಾಪಕರೇ ಇರಲಿಲ್ಲ. ಕನ್ನಡ ಬಲ್ಲ ಇಂಗ್ಲಿಷ್ ಪ್ರಾಧ್ಯಾಪಕರೇ ನೆರವಿಗೆ ಬರಬೇಕಾಯಿತು. ಕ್ರಮೇಣ ಉತ್ತಮ ಅಧ್ಯಾಪಕರು, ಸಂಶೋಧನೆಯಲ್ಲಿ ಕ್ಷಮತೆ ಮತ್ತು ಆಸಕ್ತಿ ಉಳ್ಳವರು ಬಂದು ಕನ್ನಡ ವಿಭಾಗ ಮೇರು ಶ್ರೇಣಿಗೆ ಬಂದಿತು.

ಆದರೀಗ ಓಣಿ ಓಣಿಯ ಕಾಲೇಜುಗಳಿಗೆ ಸ್ವಾಯತ್ತತೆ ದೊರಕಿ ಕನ್ನಡ ಸ್ನಾತಕೋತ್ತರ ವಿಭಾಗಗಳು ಪ್ರಾರಂಭವಾಗಿವೆ. ಇದರಿಂದ ಲೆಕ್ಕವಿಲ್ಲದಷ್ಟು ವಿದ್ಯಾರ್ಥಿಗಳ ಸೇರ್ಪಡೆಯಾಗಿ, ಪ್ರತಿ ವರ್ಷ ಸಾವಿರಾರು ಕನ್ನಡ ಸ್ನಾತಕೋತ್ತರ ಪದವೀಧರರು ಹೊರಬರುತ್ತಿದ್ದಾರೆ. ಇದರಿಂದ ಉದ್ಯೋಗ ಸಮಸ್ಯೆ ಉಂಟಾಗಿರುವುದಂತೂ ನಿಜ. ಪಿಎಚ್.ಡಿ. ಪದವಿ ಪಡೆದವರು ಹತ್ತು

ಹನ್ನೆರಡು ಸಾವಿರ ಪಡೆದು ಅತಿಥಿ ಉಪನ್ಯಾಸಕರಾಗಿರುವುದು, ಕೆಲವರು ಮಾಧ್ಯಮಿಕ ಅಥವಾ ಪ್ರಾಥಮಿಕ ಶಾಲೆಗಳಲ್ಲಿ ದುಡಿಯುತ್ತಿರುವುದು ಕಂಡುಬರುತ್ತಿದೆ. ಇದು ಗಂಭೀರ ಪರಿಸ್ಥಿತಿಯೇ ಹೌದು.

ವಿಶ್ವವಿದ್ಯಾಲಯಗಳಲ್ಲಿ ಕೇವಲ ಅತಿಥಿ ಉಪನ್ಯಾಸಕರು ಕಾರ್ಯ ನಿರ್ವಹಿಸಿದರೆ ಸಂಶೋಧನಾ ಕ್ಷೇತ್ರಕ್ಕೆ ಧಕ್ಕೆ ಅಲ್ಲವೇ? ಇದರ ಬಗ್ಗೆ ಇಂದು ಗಂಭೀರವಾಗಿ ಚಿಂತನೆ ನಡೆಸುವುದು ಅತ್ಯಗತ್ಯ. ಇಲ್ಲವಾದರೆ ಕನ್ನಡದ ಶ್ರೇಷ್ಠತೆ ಕುಂಠಿತವಾಗಬಹುದು.

**ಡಾ. ಬೆಳವಾಡಿ ಪ್ರಭಾಕರ್**
ಸಂಪಾದಕರು

## ‘ಬೂಕರ್ ಪ್ರಶಸಿ’ ವಿಜೇತರಿಗೆ ಅಭಿನಂದನೆಗಳು



2025 ನೇ ಸಾಲಿನ ‘ಬೂಕರ್ ಪ್ರಶಸ್ತಿ’ಯನ್ನು ಕನ್ನಡದ ಲೇಖಕಿ ಶ್ರೀಮತಿ ಬಾನು ಮುಷ್ತಾಕ್ ಮತ್ತು ಶ್ರೀಮತಿ ದೀಪ ಭಸ್ತಿ ಇವರು ತಮ್ಮದಾಗಿಸಿಕೊಂಡಿದ್ದಾರೆ. ಇವರಿಬ್ಬರಿಗೂ ಅಭಿನಂದನೆಗಳು.

ಬಾನು ಮುಷ್ತಾಕ್ ಅವರು ಕನ್ನಡದಲ್ಲಿ ಬರೆದಿರುವ ಸಣ್ಣ ಕಥೆಗಳ ಸಂಕಲವನ್ನು ದೀಪ ಭಸ್ತಿ ಇಂಗ್ಲಿಷ್ ಭಾಷೆಗೆ ಅನುವಾದಿಸಿರುವ Heart Lamp ಕೃತಿ ಪ್ರಪ್ರಥಮವಾಗಿ ಕನ್ನಡ ಸಾಹಿತ್ಯಕ್ಕೆ ಇಂತಹ ಪ್ರಶಸ್ತಿ ತಂದಿರುವುದು ಗಮನಾರ್ಹ.

ದೀಪ ಭಸ್ತಿ ಇವರು ನಮ್ಮ ಬಿ.ಎಂ.ಶ್ರೀ. ಪ್ರತಿಷ್ಠಾನದ ಹಳಗನ್ನಡ ವಿದ್ಯಾರ್ಥಿಯೂ ಹೌದು.

## ಇಲ್ಲಿಯವರೆಗೆ ನಡೆದ ಕಾರ್ಯಕ್ರಮಗಳು

### ದಿನಾಂಕ ೦೭.೦೫.೨೦೨೫ ಬುಧವಾರ
### ಕ.ವೆಂ. ರಾಘವಾಚಾರ್, ಡಿ.ವಿ. ಗುಂಡಪ್ಪ, ಬಿ.ಎಸ್. ಸಣ್ಣಯ್ಯ ಮತ್ತು ಡಾ.ಎಂ. ಲಲಿತಮ್ಮ ಸಂಯೋಜಿತ ದತ್ತಿ ಕಾರ್ಯಕ್ರಮ

**ಡಿ.ವಿ.ಜಿ. ಅವರ ‘ಜ್ಞಾಪಕ ಚಿತ್ರಶಾಲೆ’**




ಸರ್ಕಾರಿ ಕಲಾ ಕಾಲೇಜಿನ ಸ್ನಾತಕೋತ್ತರ ವಿಭಾಗದಲ್ಲಿ ಪ್ರಾಧ್ಯಾಪಕರಾಗಿರುವ ಡಾ. ಪಿ. ನಂಜುಂಡ ಅವರು ಡಿ.ವಿ.ಜಿ. ಅವರ ‘ಜ್ಞಾಪಕ ಚಿತ್ರಶಾಲೆ’ ಕೃತಿಯ ಬಗ್ಗೆ ಮಾತನಾಡಿದರು. ಮೊದಲಿಗೆ ಡಿ.ವಿ.ಜಿ.ಯವರ ಜೀವನ ಮತ್ತು ಸಾಹಿತ್ಯ ಸೇವೆಯನ್ನು ಪರಿಚಯಿಸುತ್ತ ಮೆಟ್ರಿಕ್ಯುಲೇಷನ್ ಉತ್ತೀರ್ಣರಾಗದ ಡಿ.ವಿ.ಜಿ.ಯವರು ಸತತ ಅಧ್ಯಯನದಿಂದ ಮೇರು ವ್ಯಕ್ತಿಯಾಗಿ ಬೆಳೆದ ಬಗೆಯನ್ನು ವಿವರಿಸಿದರು. ಜ್ಞಾಪಕ ಚಿತ್ರಶಾಲೆಯ

ಒಂದೊಂದು ಭಾಗವನ್ನೂ ಸಂಕ್ಷಿಪ್ತವಾಗಿ ಪರಿಚಯಿಸಿದರು. ಅದೊಂದು ಅಸಮಾನ್ಯ ಕೃತಿ ಎಂದು ಹೇಳಿ 'ಜನಸಾಮಾನ್ಯರನ್ನು ಭೇಟಿ ಮಾಡಿ ಅವರಲ್ಲಿರುವ ಅಸಾಮಾನ್ಯತೆಯನ್ನು ಹೆಕ್ಕಿ ತೆಗೆದವರು ಡಿ.ವಿ.ಜಿ.ಯವರು' ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ.ಬೈರಮಂಗಲ ರಾಮೇಗೌಡ ಅವರು ಮಾತನಾಡುತ್ತ ೮೦೦ ಪುಟಗಳು ೧೨೫ ಲೇಖಕರು ಇರುವ ಅಗಾಧ ಸಾಹಿತ್ಯ ರಾಶಿಯನ್ನು ಒಂದು ಗಂಟೆಯಲ್ಲಿ ಪರಿಚಯ ಮಾಡಿಕೊಡುವುದು ಕಷ್ಟದ ಕೆಲಸ. ಇಂಥಹ ಕಾರ್ಯವನ್ನು ಬಹಳ ಅಚ್ಚುಕಟ್ಟಾಗಿ ಉಪನ್ಯಾಸಕರಾದ ಪಿ. ನಂಜುಂಡ ಅವರು ಮಾಡಿಕೊಟ್ಟಿದ್ದಾರೆ ಎಂದು ಹೇಳಿ ಅವರಿಗೆ ಅಭಿನಂದನೆಗಳನ್ನು ತಿಳಿಸಿದರು. ಡಿ.ವಿ.ಜಿ.ಯವರು ತಮ್ಮ ಒಡನಾಟಕ್ಕೆ ಬಂದಂತವರ ಪರಿಚಯವನ್ನು ಬಹಳ ಚೆನ್ನಾಗಿ ಮಾಡಿಕೊಟ್ಟಿದ್ದಾರೆ. ಈ ಕೃತಿ ನಮ್ಮ ನಾಡಿನ ಸಂಸ್ಕೃತಿಯನ್ನು ಅರಿಯಲು ಸಹಾಯಕವಾಗುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದ ಪ್ರಾರಂಭದಲ್ಲಿ ಪ್ರತಿಷ್ಠಾನದ ಹಸ್ತಪ್ರತಿ ಸಂರಕ್ಷಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ದತ್ತಿ



ಸ್ಥಾಪಕರ ಪರಿಚಯ ಮಾಡಿಕೊಟ್ಟರು. ನಂತರ ಹಿಂದಿನ ದಿನ ಅಗಲಿದ ನಾಡಿನ ಪ್ರಸಿದ್ಧ ಸಾಹಿತಿ ಡಾ. ಜಿ.ಎಸ್. ಸಿದ್ಧಲಿಂಗಯ್ಯನವರ ಸ್ಮರಣಾರ್ಥ ಒಂದು ನಿಮಿಷ ಮೌನವನ್ನು ಆಚರಿಸಲಾಯಿತು.

ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯ ವಾಯಿತು.

## ದಿನಾಂಕ ೦೯.೦೫.೨೦೨೫ ಶುಕ್ರವಾರ
## ಶ್ರೀ ಎಂ. ತಿಮ್ಮಯ್ಯನವರು ಸ್ಥಾಪಿಸಿರುವ
## ಡಾ. ಎಂ. ಚಿದಾನಂದಮೂರ್ತಿ ದತ್ತಿ ಉಪನ್ಯಾಸ

ಪ್ರತಿಷ್ಠಾನದ ಹಸ್ತಪ್ರತಿ ಸಂರಕ್ಷಕರಾದ ಬಿ.ಎಸ್. ಗುರುಪ್ರಸಾದ್ ದತ್ತಿ ಬಗ್ಗೆ ಪರಿಚಯಿಸಿ ಎಲ್ಲರನ್ನೂ ಸ್ವಾಗತಿಸಿದರು.

**'ಎಂ. ಚಿದಾನಂದಮೂರ್ತಿ ಸಂಶೋಧಕರ ಮಾರ್ಗದರ್ಶಕರು'**

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾದ ಡಾ. ಚಿತ್ತಯ್ಯ ಪೂಜಾರ್ ಅವರು ಎಂ.ಚಿದಾನಂದಮೂರ್ತಿಯವರ ಸಂಶೋಧನೆ ಕುರಿತು ವಿಚಾರ ಮಂಡಿಸಿದರು. ಅಧ್ಯಾಪಕರಾಗಿ, ಕನ್ನಡಪರ ಹೋರಾಟಗಾರರಾಗಿ, ಸಂಶೋಧಕರಾಗಿ ಎಲ್ಲ ಕ್ಷೇತ್ರಗಳಲ್ಲಿಯೂ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡು ಎಂ.ಚಿದಾನಂದಮೂರ್ತಿಗಳು ಮಾಡಿದ ಸಾಧನೆ ಅಪಾರವಾದದ್ದು. 'ಸಂಶೋಧನೆ' ಎಂಬ ಅವರ ಕಿರು ಕೃತಿ ಕನ್ನಡ ಸಂಶೋಧನ ವಲಯದಲ್ಲಿ ಮೊಟ್ಟ ಮೊದಲಿಗೆ ಸಂಶೋಧನೆಯ ವಿವರಗಳನ್ನು ನೀಡಿದ ಕೃತಿಯಾಗಿದೆ. ಎಲ್ಲ ಸಂಶೋಧಕರಿಗೂ ಮಾರ್ಗದರ್ಶಕರಿಗೂ ಅದು ಕೈಪಿಡಿಯಾಗಿದೆ ಎಂದರು. ಅವರು ಹಾಕಿಕೊಟ್ಟ ಮಾದರಿಯನ್ನೇ ಇಂದಿಗೂ ಸಂಶೋಧಕರು



ಅನುಸರಿಸುತ್ತಿದ್ದಾರೆ. ಆದ್ದರಿಂದ ಅವರನ್ನು "ಸಂಶೋಧಕರ ಮಾರ್ಗದರ್ಶಕರು" ಎಂದು ಕರೆಯುತ್ತೇನೆ ಎಂದು ಶ್ಲಾಘಿಸಿದರು.

ಭಾಷಾ ವಿಜ್ಞಾನ, ಶಾಸನ, ಹಳಗನ್ನಡ ಸಾಹಿತ್ಯ ಕ್ಷೇತ್ರಗಳಲ್ಲಿ

ಎಂ. ಚಿದಾನಂದಮೂರ್ತಿಗಳು ಮಾಡಿರುವ ಅಧ್ಯಯನದ ಫಲ ಮುಂದಿನ ಜನಾಂಗಕ್ಕೆ ಅತ್ಯಂತ ಉಪಯುಕ್ತವಾಗಿದೆ. 'ಭಾಷಾವಿಜ್ಞಾನದ ಮೂಲತತ್ವಗಳು' ಕೃತಿ ಭಾಷಾ ವಿಜ್ಞಾನದ ವಿದ್ಯಾರ್ಥಿಗಳಿಗೆ ನೆಚ್ಚಿನ ಪರಾಮರ್ಶನ ಗ್ರಂಥವಾಗಿದೆ. ಶಾಸನತಜ್ಞರು, ಚಳವಳಿಗಾರರು, ಸಂಶೋಧಕರು ಆಗಿ ಕನ್ನಡ ಸಾಹಿತ್ಯ ಸಂಸ್ಕೃತಿ ನೆಲ ಜಲ ಕುರಿತಂತೆ ೨೪ ಕೃತಿಗಳನ್ನು ರಚಿಸಿದ್ದಾರೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು. ಬೇರೆಯವರಿಗಿಂತ ಭಿನ್ನವಾಗಿ ಆಲೋಚಿಸುವ ಪಾದರಸದಂತಹ ವ್ಯಕ್ತಿತ್ವವುಳ್ಳ ಚಿದಾನಂದಮೂರ್ತಿಯವರು ಸದಾ ಕ್ಷೇತ್ರಕಾರ್ಯ, ಗ್ರಂಥಾಲಯ ಎಂದು ತಮ್ಮನ್ನು ತೊಡಗಿಸಿಕೊಂಡಿದ್ದರು. ಮನೆಯ ಬಳಿ ಹೋರಾಟಗಾರರು ಸದಾ ಅವರ ನಿರೀಕ್ಷೆಯಲ್ಲಿ ಇರುತ್ತಿದ್ದರು. ಕನ್ನಡ ಶಕ್ತಿ ಕೇಂದ್ರ, ಸಾಹಿತಿ ಕಲಾವಿದರ ಬಳಗ, ಗೋಕಾಕ್ ಚಳವಳಿಯ ಮೂಲಕ ಅವರು ಕನ್ನಡ ನಾಡಿನ ಸಮಗ್ರತೆಯ ಬಗ್ಗೆ ದೊಡ್ಡ ಹೋರಾಟವನ್ನು ಮಾಡಿದವರು. ಬಹುಮುಖ ವ್ಯಕ್ತಿತ್ವದ ಚಿದಾನಂದಮೂರ್ತಿಗಳು ಬಾಹ್ಯಾಡಂಬರ ಒಪ್ಪದವರು. ಆಂತರಿಕ ಬೆಳವಣಿಗೆಗೆ ಒತ್ತನ್ನು ನೀಡಿದವರು. ಆತ್ಮವಿಶ್ವಾಸ, ನೇರ ನುಡಿ ಅವರ ಪ್ರಮುಖ ಗುಣಗಳಾಗಿದ್ದವು. ಚಿದಾನಂದಮೂರ್ತಿಗಳ ಸಂಶೋಧನೆಯ ವಿಷಯಗಳನ್ನು ಸಮಕಾಲೀನರು ವಿರೋಧಿಸುತ್ತಿದ್ದರು. ಅಂತಹ ಸಂದರ್ಭದಲ್ಲಿ ಯಾರಾದರೂ ಸತ್ಯವನ್ನು ಹೇಳಿದರೆ ಅದನ್ನು ಒಪ್ಪಿಕೊಳ್ಳುವ ಮನೋಭಾವ ಅವರಿಗೆ ಇತ್ತು. ತಮ್ಮ ನಿಲುವಿಗೆ ಬೇರೆ ರೀತಿ ಸಾಕ್ಷ್ಯಾಧಾರ ಸಿಕ್ಕಿದಾಗ ವಿನಯದಿಂದ ಬದಲಾಯಿಸಿಕೊಳ್ಳುವ ದೊಡ್ಡ ಗುಣ ಬೆಳೆಸಿಕೊಂಡಿದ್ದರು. ಕನ್ನಡಪರ ಆಲೋಚನಾ ಕ್ರಮ, ಅಧ್ಯಯನ, ಸೌಜನ್ಯಗುಣ, ಕೆಲಸಗಳ ಬಗ್ಗೆ ಬದ್ಧತೆ, ವಿಶಿಷ್ಟವಾದ ಚಿಂತನೆ, ಸೂಕ್ಷ್ಮಾವಲೋಕನ ಇವೆಲ್ಲ ಅವರ ಗುಣಗಳಾಗಿದ್ದವು. ಇತಿಹಾಸ, ಶಾಸ್ತ್ರಸಾಹಿತ್ಯ, ಭಾಷಾ ವಿಜ್ಞಾನ ಇಂತಹ ಶೈಕ್ಷಣಿಕ ವಿಚಾರಗಳಲ್ಲದೆ ಕನ್ನಡ ಪರ ಹೋರಾಟದಲ್ಲಿ ಸಂಪೂರ್ಣವಾಗಿ ತಮ್ಮನ್ನ ತೊಡಗಿಸಿಕೊಂಡಿದ್ದರು. ಹಂಪಿಯ ಸ್ಮಾರಕಗಳನ್ನು ಉಳಿಸುವ ಬಗ್ಗೆ ದೊಡ್ಡ ಮಟ್ಟದ ಹೋರಾಟವನ್ನು ಮಾಡಿದರು. ತಮ್ಮಲ್ಲಿದ್ದ ಹಸ್ತಪ್ರತಿ, ತಾಳೆಗರಿಯಲ್ಲಿದ್ದ ಮಾಹಿತಿಗಳನ್ನು ಒಂದು ಕಡೆ ಕ್ರೋಢೀಕರಿಸಿ ವರದಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕೊಟ್ಟು ಶಾಸ್ತ್ರೀಯ ಭಾಷೆ ಸ್ಥಾನಮಾನ ಕನ್ನಡಕ್ಕೆ ಸಿಗುವುದಕ್ಕೆ ಕಾರಣರಾದವರು ಚಿದಾನಂದಮೂರ್ತಿಗಳು. ೧೯೬೨ರಲ್ಲಿ ಭಾರತ ಚೀನಾ ಯುದ್ಧದ ಸಂದರ್ಭದಲ್ಲಿ ತಾವು ಸ್ನಾತಕೋತ್ತರ ಪದವಿಯಲ್ಲಿ ಪಡೆದ ಚಿನ್ನದ ಪದಕವನ್ನು ಮಾರಿ ಸೈನಿಕರಿಗೆ ಸಹಾಯಧನ ಕೊಟ್ಟವರು. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಎಂಬ ತಮ್ಮ ಪಿಎಚ್.ಡಿ. ಪ್ರಬಂಧವನ್ನು ಮಂಡಿಸಿ ಮುಂದಿನ ಸಂಶೋಧಕರಿಗೆ ಆದರ್ಶವಾದಂತಹ ಕೃತಿಯನ್ನು ಕನ್ನಡಕ್ಕೆ ಕೊಟ್ಟಿದ್ದಾರೆ. ಚಿದಾನಂದಮೂರ್ತಿ ಅವರಿಗೆ ಅಧಿಕಾರ ಅಂತಸ್ತು ಬೇಕಿರಲಿಲ್ಲ. ಅತ್ಯಂತ ಸರಳ ವ್ಯಕ್ತಿತ್ವದವರಾಗಿದ್ದರು. ಗೋಕಾಕ್ ಚಳವಳಿಯ ಸಂದರ್ಭದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥ ಹುದ್ದೆಗೆ ರಾಜೀನಾಮೆ ನೀಡಿ ತಮ್ಮನ್ನು ಸಂಪೂರ್ಣವಾಗಿ ಕನ್ನಡ ಚಳವಳಿಯ ಹೋರಾಟಕ್ಕೆ ತೊಡಗಿಸಿಕೊಂಡವರು.

ಹೀಗೆ ಎಂ. ಚಿದಾನಂದಮೂರ್ತಿಯವರು ಸಂಶೋಧನಾ ಕ್ಷೇತ್ರಕ್ಕೆ ಕೊಟ್ಟ ಅಪಾರ ಕೊಡುಗೆಯನ್ನು ಸಮಗ್ರವಾಗಿ ಅಧ್ಯಯನ ಮಾಡಿ ಡಾ. ಚಿತ್ತಯ್ಯ ಪೂಜಾರ್ ಅವರು ಸಮರ್ಥವಾಗಿ ಸಭಿಕರ ಮುಂದೆ ಮಂಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರು ಕನ್ನಡ ಅಧ್ಯಯನ ಕೇಂದ್ರ ಅಂದಿನ ಕಾಲದಲ್ಲಿ ಹೊಂದಿದ್ದ ಘನ ವಿದ್ವಾಂಸರು ಹಾಗೂ ಅವರು ಸಾಹಿತ್ಯ ವಿಮರ್ಶೆ–ಸಂಶೋಧನೆಗೆ ಕೊಟ್ಟಿರುವ ಗಣನೀಯ ಕೊಡುಗೆಯ ಬಗ್ಗೆ ಮಾತನಾಡಿದರು. ಅಂತಹವರ ಮಧ್ಯೆ ಇದ್ದ ಚಿದಾನಂದಮೂರ್ತಿಯವರು ವಿದ್ಯಾರ್ಥಿಸ್ನೇಹಿ ಶಿಕ್ಷಕರಾಗಿದ್ದು ಪಾಠ ಮತ್ತು ಬರವಣಿಗೆಯಲ್ಲಿ ಹೊಸ ಹೊಳವುಗಳನ್ನು ಕಂಡು ಮಕ್ಕಳಿಗೆ ತಿಳಿಸಿದವರು. ಅವರ ಸಂಶೋಧನೆ ನಿಷ್ಠೆ ಇಂದಿನವರಿಗೂ ಬರಲಿ ಎಂದು ಆಶಿಸಿದರು.




ಕಾರ್ಯಕ್ರಮದ ಕೊನೆಯಲ್ಲಿ ಪ್ರತಿಷ್ಠಾನದ ಕೋಶಾಧಿಕಾರಿ ಚಂದ್ರಶೇಖರ್ ವಂದನಾರ್ಪಣೆ ಮಾಡುವುದರೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ದಿನಾಂಕ ೨೦.೦೫.೨೦೨೫ ಮಂಗಳವಾರ

## ಶ್ರೀಮತಿ ಸುಬ್ಬರತ್ನಮ್ಮ ಶ್ರೀ ಆರ್.ಕೆ. ಚಂದ್ರಶೇಖರ ಗುಪ್ತ ಸ್ಮಾರಕದತ್ತಿ, ಶ್ರೀಮತಿ ಮುದ್ದಮ್ಮ ಶ್ರೀ ಆರ್.ಸಿ. ಕೃಷ್ಣಶೆಟ್ಟಿ ಸ್ಮಾರಕ ದತ್ತಿ ಹಾಗೂ ಶ್ರೀಮತಿ ಸುಜಾತ ಶ್ರೀ ರಾ.ಕೃ. ಶ್ರೀಧರಮೂರ್ತಿ ದತ್ತಿ ಕಾರ್ಯಕ್ರಮ



**ಪ್ರಶಸ್ತಿ ಪ್ರದಾನ**

ರಾ.ಕೃ. ಶ್ರೀಧರಮೂರ್ತಿಯವರು ಅವರ ಅಣ್ಣ ಅತ್ತಿಗೆ ಹಾಗೂ ಪೋಷಕರ ಹೆಸರಿನಲ್ಲಿ ಸ್ಥಾಪಿಸಿರುವ ದತ್ತಿಯಿಂದ ಭಾಷಾಂತರ ಹಾಗೂ ಪ್ರವಾಸದ ಅನುಭವಗಳನ್ನು ಕುರಿತ ಲೇಖನಗಳಿಗೆ ಪ್ರತ್ಯೇಕವಾಗಿ ಒಂದೊಂದು ಬಹುಮಾನದ ಜೊತೆಗೆ ಉತ್ತಮ ಸಂಶೋಧನಾರ್ಥಿ ಬಹುಮಾನವನ್ನು ವಿತರಿಸಲಾಯಿತು.

**ಪ್ರಶಸ್ತಿ ವಿಜೇತರು**

'ಭಾಷಾಂತರದ ಪ್ರಯೋಜನಗಳು ಲೇಖನ ಸ್ಪರ್ಧೆ' ವಿಭಾಗದಲ್ಲಿ ಇಂದು, ಬೆಂಗಳೂರಿನಲ್ಲಿ ಮಾಧ್ಯಮ ವಿಷಯದ ಅಧ್ಯಾಪಕರಗಿರುವ ಹಾಗೂ ಹಲವಾರು ಹೆಸರಾಂತ ಪ್ರಶಸ್ತಿಗಳನ್ನು ಪಡೆದಿರುವ ಶ್ರೀಯುತ ದಯಾನಂದ ಅವರು ಬಹುಮಾನ ಪಡೆದರೆ, 'ಪ್ರವಾಸ ಸಾಹಿತ್ಯದ ಅನುಭವಗಳು' ಲೇಖನಕ್ಕೆ ಶ್ರೀಮತಿ ವಸುಂಧರ ಅವರು ಬಹುಮಾನ ಸ್ವೀಕರಿಸಿದರು ಹಾಗೂ ಎಂ.ವಿ.ಸೀ. ಸಂಶೋಧನಾ ಕೇಂದ್ರದ ಉತ್ತಮ ಸಂಶೋಧನಾರ್ಥಿ ಬಹುಮಾನವನ್ನು ಶ್ರೀಮತಿ ಪಾಟೀಲ ಶೋಭಾ ಅವರು ಪಡೆದರು. ಮುಖ್ಯ ಅತಿಥಿಗಳಾಗಿದ್ದ ಶ್ರೀ ಶ್ರೀಧರಮೂರ್ತಿಯವರು ಹಾಗೂ ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರು ಬಹುಮಾನ ವಿತರಣೆ ಮಾಡಿದರು. ಬಹುಮಾನ ಪಡೆದ ಮೂವರೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ.ಬೈರಮಂಗಲ ರಾಮೇಗೌಡ ಅವರು ಮಾತನಾಡಿ ಇಂತಹ



ಒಳ್ಳೆಯ ಕಾರ್ಯಕ್ರಮಗಳು ನಡೆಯಬೇಕು ಆದರೆ ಪ್ರಶಸ್ತಿಯ ಮೊತ್ತವನ್ನು ಉತ್ತಮ ಪಡಿಸುವುದಕ್ಕಾಗಿ ದತ್ತಿಯ ಮೌಲ್ಯ ಹೆಚ್ಚು ಮಾಡುವ ಅವಶ್ಯಕತೆ ಇದೆ ಎಂಬುದನ್ನು ದತ್ತಿದಾನಿಗಳಿಗೆ ಮನದಟ್ಟು ಮಾಡಿಕೊಟ್ಟರು. ಹಸ್ತಪ್ರತಿ ವಿಭಾಗದ ಸಂರಕ್ಷಕರಾದ ಬಿ.ಎಸ್. ಗುರುಪ್ರಸಾದ್ ಕಾರ್ಯಕ್ರಮದ ಪ್ರಾರಂಭದಲ್ಲಿ ದತ್ತಿ ದಾನಿಗಳ ಬಗ್ಗೆ ಪರಿಚಯವನ್ನು ಮಾಡಿಕೊಟ್ಟು ಎಲ್ಲರನ್ನೂ ಸ್ವಾಗತಿಸಿದರು. ಕೋಶಾಧಿಕಾರಿ ಚಂದ್ರಶೇಖರ್ ವಂದನಾರ್ಪಣೆ ಮಾಡಿದರು.

## ದಿನಾಂಕ ೨೭.೦೫. ೨೦೨೫ ಮಂಗಳವಾರ

## ವೈಯಾಕರಣಿ ಗರಣಿ ಕೃಷ್ಣಾಚಾರ್ಯ ದತ್ತಿ ಕಾರ್ಯಕ್ರಮ

**'ಕಾವ್ಯಮೀಮಾಂಸೆ ಬೇಂದ್ರೆ ದೃಷ್ಟಿ'**

ವಿವೇಕಾನಂದ ಕಾಲೇಜಿನ ಕನ್ನಡ ಅಧ್ಯಾಪಕರಾದ ಡಾ. ಸುರೇಶ್ ನಾಗಲಮಡಿಕೆ ಅವರು 'ಕಾವ್ಯಮೀಮಾಂಸೆ ಬೇಂದ್ರೆ ದೃಷ್ಟಿ' ಎಂಬ ವಿಷಯದ ಬಗ್ಗೆ ವಿಚಾರಪೂರ್ಣವಾದ ಉಪನ್ಯಾಸ ನೀಡಿದರು. ನವೋದಯ ಸಾಹಿತ್ಯ ಸಂದರ್ಭದಲ್ಲಿ ಕಾವ್ಯಮೀಮಾಂಸೆ ಪಡೆದುಕೊಂಡ ಆಯಾಮಗಳನ್ನು ಚರ್ಚಿಸಿದರು. ಸಂಸ್ಕೃತ ಕಾವ್ಯಮೀಮಾಂಸೆ, ಪಾಶ್ಚಾತ್ಯ ಕಾವ್ಯಮೀಮಾಂಸೆ, ಪಾಶ್ಚಾತ್ಯ ವಿಮರ್ಶೆ ಈ ಮೂರು ಮಾನದಂಡಗಳನ್ನು ಹೇಗೆ ಇಂದಿನ ಸೃಜನಶೀಲ ಸಾಹಿತ್ಯ ಅಳವಡಿಸಿಕೊಳ್ಳಬಹುದು ಎಂಬ ಬಗ್ಗೆ ಯೋಚಿಸಬೇಕಾಗಿದೆ. ನವೋದಯ ಸಂದರ್ಭದಲ್ಲಿ ಕುವೆಂಪು, ಬೇಂದ್ರೆ, ಪುತಿನ ಇವರುಗಳು ಕಾವ್ಯ ಮೀಮಾಂಸೆ ಬಗ್ಗೆ ನಡೆಸಿದ ಚಿಂತನೆಯನ್ನು ವಿವರಿಸುತ್ತ, ಅಧ್ಯಯನ ಮಾಡಿ ಅದನ್ನು ಪ್ರಸ್ತುತ ಸಂದರ್ಭದಲ್ಲಿ ವಿಸ್ತರಿಸಬೇಕಾಗಿದೆ ಎಂಬುದರ ಕಡೆ ಗಮನ ಸೆಳೆದರು. ಸಾಹಿತ್ಯ–



ಸಾಹಿತಿ –ಸಹೃದಯ ಇವುಗಳ ಬಗ್ಗೆ ಬೇಂದ್ರೆಯವರ ಚಿಂತನೆಯ ಮೂಲಕ ಕನ್ನಡ ಸಾಹಿತ್ಯ ಮೀಮಾಂಸೆಯನ್ನು ಹೇಗೆ ಕಟ್ಟಲು ಪ್ರಯತ್ನಿಸಬೇಕು ಎಂಬುದನ್ನು ತಿಳಿಸಿದರು. 'ಸಾಹಿತ್ಯದ ವಿರಾಟ್ ಸ್ವರೂಪ' ಕೃತಿಯಲ್ಲಿ ಅವರು ಪಂಪನಿಂದ ಹಿಡಿದು ಪ್ರಸ್ತುತದವರೆಗೆ ಕಾವ್ಯಮೀಮಾಂಸೆಯ ಹೊಸ ನುಡಿಗಟ್ಟುಗಳನ್ನು ಯೋಚಿಸಿದವರು, ಅದರಲ್ಲೂ ಪ್ರಮುಖವಾಗಿ ದೇಸಿ ಕವಿಗಳ ಬಗ್ಗೆ ಅತಿ ಹೆಚ್ಚು ಚರ್ಚೆ ಮಾಡುವ ಮೂಲಕ ತಮ್ಮ ಒಲವು ದೇಸಿ ಕಾವ್ಯದ ಕಡೆ ಇತ್ತು ಎಂಬುದನ್ನು ತಿಳಿಸಿದ್ದಾರೆ. ರಸ ಸಿದ್ಧಾಂತದ ಬಗ್ಗೆ ಅವರ ಒಲವು ಬೇರೆಯೇ ಇತ್ತು. ಭಕ್ತಿಯು ಕೂಡ ಒಂದು ರಸವಾಗಿ ಕಾಣಬೇಕು ಎಂಬ ಅಂಶ ಅವರ ಕಾವ್ಯಮೀಮಾಂಸೆಗಳಲ್ಲಿ ಮೂಡಿಬಂದಿದೆ. ಮಧ್ಯಕಾಲೀನ ಪ್ರಾಚೀನ ಸಾಹಿತ್ಯ ಕೃತಿಗಳಲ್ಲಿ ಬೇಂದ್ರೆ ಅವರಿಗೆ ಇಷ್ಟವಾದದ್ದು ಹಾಡುಗಬ್ಬ. ಕವಿಗಳಿಗೆ ರಸ ಎನ್ನುವುದು ಶಬ್ದಾರ್ಥಗಳ ಸಾಮರಸ್ಯ ಹಾಗೂ ಶಿವ ಮತ್ತು ಶಕ್ತಿಗಳ ಒಂದುಗೂಡುವಿಕೆ. ಸತ್ಯ–ಸೌಂದರ್ಯ ಎರಡು ಬೇರೆ ಬೇರೆ ಅಲ್ಲ ಎಂಬುದು ಬೇಂದ್ರೆಯವರ ನಿಲುವಾಗಿತ್ತು. ಶಿವ–ಶಕ್ತಿ, ಶಬ್ದ–ಅರ್ಥ ಐಕ್ಯತೆಯನ್ನು ಹೊಂದಿದಾಗ ಮಾತ್ರ ಆತ್ಮವಿಶುದ್ಧಿಯಾಗುತ್ತದೆ, ದರ್ಶನ ಸಿಗುತ್ತದೆ ಎಂಬ ಅಭಿಪ್ರಾಯ ಬೇಂದ್ರೆಯವರದಾಗಿತ್ತು ಎಂಬುದನ್ನು ಸಮಂಜಸವಾಗಿ ತಿಳಿಸಿದರು.

ಸಾಹಿತ್ಯ ಎನ್ನುವುದು ಕೇವಲ ರಸ ಸಿದ್ಧಾಂತದಿಂದಲೂ, ಕಾವ್ಯಮೀಮಾಂಸೆಯ ಪರಿಕಲ್ಪನೆಗಳಿಂದಲೂ ಆಗದು. ಮಿಮಾಂಸೆಯ ಜೊತೆಗೆ ಜೀವನದ ಹಲವು ಮುಖಗಳು ಮುಖ್ಯ ಎಂಬುದನ್ನು ಬೇಂದ್ರೆಯವರು ಚರ್ಚಿಸುತ್ತಾರೆ. 'ಕನ್ನಡ ಸಾಹಿತ್ಯದ ನಾಲ್ಕು ನಾಯಕ ರತ್ನಗಳು' ಎಂಬ ಅವರ ಲೇಖನದಲ್ಲಿ ಭರತ, ರಾವಣ, ಕೃಷ್ಣ ಮತ್ತು ಅಲ್ಲಮ ಈ ನಾಲ್ಕು ಪಾತ್ರಗಳ ಬಗ್ಗೆ ತಮ್ಮದೇ ಆದ ಚರ್ಚೆಯನ್ನು ಮಂಡಿಸುತ್ತಾರೆ. ಬೇಂದ್ರೆಯವರ ಚರ್ಚೆಗಳೆಲ್ಲ ಹೆಚ್ಚಿನ ಮಟ್ಟಿಗೆ ಜನಪದ ಸಾಹಿತ್ಯಕ್ಕೆ ಹತ್ತಿರವಾದದ್ದು. 'ರನ್ನ ಕವಿ ಪ್ರಶಸ್ತಿ' ಎಂಬ ಕೃತಿ ಬಂದ ಸಂದರ್ಭದಲ್ಲಿ ಅಲ್ಲಿನ ದುರ್ಯೋಧನ ಪಾತ್ರವನ್ನು ಅತಿಯಾಗಿ ವೈಭವೀಕರಿಸಿ ಮಹಾನುಭಾವ ಎಂದು ಅವನನ್ನು ಕರೆದಿರುವುದನ್ನು ಬೇಂದ್ರೆಯವರು ಒಪ್ಪುವುದಿಲ್ಲ. ಅದು ರನ್ನ ಕವಿ ಪ್ರಶಸ್ತಿಯಾಗದೆ ದುರ್ಯೋಧನ ಪ್ರಶಸ್ತಿಯಾಗಿದೆ, ದುರ್ಯೋಧನ ಅಭಿಮಾನ ಧನ ಆಗುತ್ತಾನೆ ಹೊರತು ಮಹಾನುಭಾವನಾಗಲಾರ ಎಂಬುದು ಬೇಂದ್ರೆಯವರ ಅಭಿಪ್ರಾಯವಾಗಿತ್ತು. ಅಂದಿನ ಕಾಲದ ಹಿರಿಯರಲ್ಲಿ ಆರೋಗ್ಯಪೂರ್ಣ ಚರ್ಚೆ ಇರುತ್ತಿತ್ತು. ಎಂದೂ ಪರಸ್ಪರ ಕೆಸರು ಎರಚಾಡಲಿಲ್ಲ. ಸೇಡಿಯಾಪು ಅವರ 'ನೆತ್ತಮನಾಡಿ ಭಾನುಮತಿ ಸೋಲ್ತೊಡೆ' ಲೇಖನ ಬಂದ ಸಂದರ್ಭದಲ್ಲಿ ನಡೆದಂತಹ ಚರ್ಚೆಗಳು ಆರೋಗ್ಯಪೂರ್ಣ ಚರ್ಚೆಗಳಾಗಿದ್ದವು. ಅಂತಹ ಚರ್ಚೆಗಳ ಅವಶ್ಯಕತೆ ಈಗ ಇದೆ. ಬೇಂದ್ರೆಯವರ ಕಾವ್ಯಮೀಮಾಂಸೆಯ ದೃಷ್ಟಿಕೋನದ ಜೊತೆಜೊತೆಗೆ ಕುವೆಂಪು, ಪುತಿನ ಅವರ ದೃಷ್ಟಿಕೋನವನ್ನು ಚರ್ಚಿಸಿ ಪ್ರಸ್ತುತ ಸೃಜನಶೀಲ ಸಾಹಿತ್ಯ ಸಂದರ್ಭದಲ್ಲಿ ವಿಸ್ತರಿಸಿಕೊಳ್ಳಬೇಕಾದ ಅಗತ್ಯವಿದೆಯೆಂಬದನ್ನು ಸುರೇಶ್ ನಾಗಲಮಡಿಕೆ ತಮ್ಮ ಉಪನ್ಯಾಸದಲ್ಲಿ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಡಾ.ಆರ್.ಲಕ್ಷ್ಮೀನಾರಾಯಣ ಅವರು ಬೇಂದ್ರೆಯವರ ಕಾವ್ಯದ ಸೊಗಸನ್ನು ಮತ್ತು ಕಾವ್ಯಭಾಷೆಯ ಸೊಗಡನ್ನು ಪರಿಚಯಿಸಿದರು. ಅಧ್ಯಯನ ಪೂರ್ಣವಾದ ಸುರೇಶ್ ನಾಗಲಮಡಿಕೆಯವರ ವಿಚಾರಧಾರೆಗಳನ್ನು ಮೆಚ್ಚಿಕೊಂಡು ಅವರನ್ನು ಅಭಿನಂದಿಸಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಹಸ್ತಪ್ರತಿ ಸಂರಕ್ಷಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ದತ್ತಿ ಪರಿಚಯವನ್ನು ಮಾಡಿಕೊಟ್ಟರು, ಕೋಶಾಧಿಕಾರಿ ಚಂದ್ರಶೇಖರ ನಾದೂರ್ ಸ್ವಾಗತ ಮತ್ತು ವಂದನಾರ್ಪಣೆ ನಡೆಸಿಕೊಟ್ಟರು.





# ಬಿ.ಎಂ.ಶ್ರೀಕಂಠಯ್ಯ

## ೭. ಕನ್ನಡ ಸಾಹಿತ್ಯದ ಚರಿತ್ರೆ

ಮುಂದುವರೆದ ಭಾಗ...

ಡಾ. ರಾಮೇಗೌಡ (ರಾಗೌ)

ಕನ್ನಡ ಸಾಹಿತ್ಯದಲ್ಲಿ ಹನ್ನೊಂದನೆಯ ಶತಮಾನವನ್ನು ಬರಗಾಲವೆಂದೇ ಕರೆಯಲಾಗಿದೆ. ಇದನ್ನು ಗುರುತಿಸಿದ ಶ್ರೀಯವರು, ಅದಕ್ಕೆ ಕಾರಣವನ್ನು 'ರಾಜ್ಯ ವಿಪ್ಲವ'ದಲ್ಲಿ ಹುಡುಕಲು ಪ್ರಯತ್ನಿಸುತ್ತಾರೆ. ರಾಜಕೀಯ ಕ್ರಾಂತಿಗಳು ಕಾವ್ಯರಚನೆಯ ಮೇಲೆ ಪ್ರಭಾವ ಬೀರಬಹುದಾದರೂ, ಶೂನ್ಯವನ್ನು ಸೃಷ್ಟಿಸುತ್ತವೆ ಎಂಬುದಾಗಿ ಹೇಳಲಾಗದು. ಕವಿಗಳ ರಾಜಾಶ್ರಯದ ಮೇಲೆ ಒತ್ತುಕೊಟ್ಟ ಶ್ರೀಯವರು, "ರಾಜರ ಆಶ್ರಯ ತಪ್ಪಿ, ಈ ಕಾಲದಲ್ಲಿ ಶ್ರೇಷ್ಠ ಕವಿಗಳು ಏಳಲಿಲ್ಲ" ಎಂದು ಹೇಳುತ್ತಾರೆ. ಪ್ರಾಚೀನ ಸಾಹಿತ್ಯ ಸಂದರ್ಭದಲ್ಲಿ ಕವಿಗಳಿಗೂ ರಾಜಾಶ್ರಯಕ್ಕೂ ಸಂಬಂಧವಿತ್ತೆಂದು ವಾದಿಸಿ, ಅದು ತಪ್ಪಿದಾಗ ಹೀಗಾಯಿತೆಂದು ಅಭಿಪ್ರಾಯ ಪಡುವುದು ಸಹಜ. ರಾಜಾಶ್ರಯವಿಲ್ಲದೆ ಕವಿಗಳಿರುವುದೂ, ರಾಜಾಶ್ರಯವಿದ್ದರೂ ಕಳಪೆ ಕಾವ್ಯಗಳನ್ನು ರಚಿಸಿರುವುದೂ ಸಾಧ್ಯವಿರುವುದರಿಂದ ಈ ಮಾತನ್ನು ಹಾಗೆಯೇ ತೆಗೆದುಕೊಳ್ಳಬೇಕಾದ ಅಗತ್ಯ ಕಾಣದು. ಹನ್ನೊಂದನೆಯ ಶತಮಾನದ 'ಶೂನ್ಯ'ಕ್ಕೆ ಬೇರೆಯ ಕಾರಣವನ್ನು ಹುಡುಕುವುದು ಸೂಕ್ತವೆನಿಸುತ್ತದೆ.

ಶ್ರೀಯವರ 'ಕನ್ನಡ ಸಾಹಿತ್ಯದ ಚರಿತ್ರೆ'ಯ ಕಡೆಯ ಭಾಗ ನಾಗಚಂದ್ರನನ್ನು ಕುರಿತದ್ದು; ಅಲ್ಲಿಂದ ಮುಂದಕ್ಕೆ ಅವರು ತಮ್ಮ ಸಾಹಿತ್ಯ ಚರಿತ್ರೆಯನ್ನು ಮುಂದುವರಿಸಿಲ್ಲವೆನ್ನುವುದನ್ನು ಈಗಾಗಲೇ ಹೇಳಿದೆ. ನಾಗಚಂದ್ರನನ್ನು 'ಆಚಾರ್ಯಕವಿ' ಎಂದು ಕರೆದಿರುವುದನ್ನು ಒಪ್ಪಿಕೊಳ್ಳೋಣ; ಹಾಗೆಯೇ "ಈತನ ಗ್ರಂಥಗಳಲ್ಲಿ ಕ್ಷಾತ್ರಕ್ಕಿಂತಲೂ ಭಕ್ತಿ ವೈರಾಗ್ಯಗಳು ಹೆಚ್ಚಾಗಿ ಹರಿಯುತ್ತವೆ" ಎಂಬುದನ್ನು ತುಸು ಪರಿಷ್ಕಾರದೊಡನೆ ಸ್ವೀಕರಿಸೋಣ. ಇಲ್ಲಿನ 'ಭಕ್ತಿ' ಪದಕ್ಕೆ ಬದಲಾಗಿ 'ಧರ್ಮ' ಎಂದು ಸೇರಿಸಿದರೆ ಉತ್ತಮ. ಪ್ರಾಚೀನ ಕಾವ್ಯ ಸಮುದಾಯದಲ್ಲಿ 'ರಾಮಚಂದ್ರಚರಿತ ಪುರಾಣ'ದ್ದು ನಿಸ್ಸಂದೇಹವಾಗಿಯೂ ದೊಡ್ಡ ಹೆಸರು. ಆದರೆ 'ಪಂಪ ಭಾರತ'ದ ಪ್ರಾಶಸ್ತ್ಯವನ್ನು ಅಭಿನವ ಪಂಪನ 'ಪಂಪ ರಾಮಾಯಣ' ಸಾಧಿಸಿದೆ ಎಂದು ಹೇಳುವುದು ಕಷ್ಟವಾಗಬಹುದು. ಅದಕ್ಕೆ ಮುಖ್ಯವಾಗಿ ಎರಡು ಕಾರಣಗಳು : ಪಂಪ ಭಾರತಕ್ಕಿರುವ ಶಿಲ್ಪ ಪಂಪ ರಾಮಾಯಣಕ್ಕಿಲ್ಲ ಎನ್ನುವುದು ಒಂದು; ಪಂಪ ರಾಮಾಯಣ ಧಾರ್ಮಿಕ ಕೃತಿಯಾಗಿರುವುದು ಇನ್ನೊಂದು. ಈ "ಕಾವ್ಯಕಥೆ ಜೈನ ವಾತಾವರಣದಿಂದ ಮುಸುಕಿಹೋಗಿದೆ" ಎಂದು ಅವರೇ ಹೇಳಿಯೂ, ಪಂಪ

## ಪ್ರಸ್ತುತ ತಿಂಗಳ ಅಂಗಳ

**೦೮.೦೬.೨೦೨೫ ಭಾನುವಾರ ಬೆಳಗ್ಗೆ ೧೦.೩೦ ಗಂಟೆಗೆ**
ಶ್ರೀ ಕೆ. ಮೋಹನ್‌ದೇವ್ ಆಳ್ವ ಮತ್ತು ಡಾ. ಎಂ.ಕೆ. ಶೈಲಜಾ ಆಳ್ವ ಸ್ಥಾಪಿಸಿರುವ ನಾದಯೋಗಿ ಶ್ರೀ ಭೈರವಿ ಕೆಂಪೇಗೌಡ ದತ್ತಿ ಆಶ್ರಯದಲ್ಲಿ ಭೈರವಿ ರಾಗದ ಗಾಯನ ಸ್ಪರ್ಧೆ
(ಉತ್ತರಾದಿ ಅಥವಾ ದಕ್ಷಿಣಾದಿ)

**೧೧.೦೬.೨೦೨೫ ಬುಧವಾರ ಸಂಜೆ ೫.೦೦ ಗಂಟೆಗೆ**
ಡಾ. ಬೆಂ.ಶಾ. ಶ್ಯಾಮಲಾ ರತ್ನಕುಮಾರಿ ಸ್ಥಾಪಿಸಿರುವ ಶ್ರೀಮತಿ ವಿಶಾಲಾಕ್ಷಮ್ಮ ಶ್ರೀ ಬಿ.ಎಸ್. ಶ್ಯಾಮಣ್ಣ (ರಾಮಭದ್ರ ಶಾಸ್ತ್ರೀ) ಸ್ಮರಣಾರ್ಥ ದತ್ತಿ ಉಪನ್ಯಾಸ
ವಿಷಯ : ಕರ್ನಾಟಕ ಸಂಸ್ಕೃತಿಯ ಇತ್ತೀಚಿನ ಬೆಳವಣಿಗೆ
ಉದ್ಘಾಟನೆ ಮತ್ತು ವಿಚಾರ ಮಂಡನೆ : ಡಾ. ಶೇಷಶಾಸ್ತ್ರೀ, ಹಿರಿಯ ವಿದ್ವಾಂಸರು

**೨೧.೦೬.೨೦೨೫ ಶನಿವಾರ ಸಂಜೆ: ೫.೦೦ ಗಂಟೆಗೆ**
ಶ್ರೀಮತಿ ಜಯಲಕ್ಷ್ಮಮ್ಮ ಮತ್ತು ಬಾಪು ರಾಮಣ್ಣ ದತ್ತಿ
ವಿಷಯ : ಕುವೆಂಪು ಅವರ ಶ್ರೀರಾಮಾಯಣ ದರ್ಶನಂ ಮಹಾಕಾವ್ಯ: ಶಿಲಾತಪಸ್ವಿನಿ ಭಾಗ
ವಾಚನ ಮತ್ತು ವ್ಯಾಖ್ಯಾನ : ಶ್ರೀ ಗಂಗನಹಳ್ಳಿ ಶಿವಲಿಂಗಯ್ಯ

**೨೫.೦೬.೨೦೨೫ ಬುಧವಾರ ಸಂಜೆ ೫.೦೦ ಗಂಟೆಗೆ**
ಶ್ರೀಮತಿ ಎಸ್.ಕೆ.ಪ್ರೇಮ ಪ್ರೊ.ಜಿ.ಎಸ್. ಸಿದ್ಧಲಿಂಗಯ್ಯ ದತ್ತಿ
ವಿಷಯ : ಅಲಕ್ಷಿತ ವಚನಕಾರ್ತಿಯರ ವಚನಗಳೊಂದಿಗೆ – ಒಂದು ಅನುಸಂಧಾನ
ವಿಚಾರ ಮಂಡನೆ : ಡಾ. ಟಿ. ಯಲ್ಲಪ್ಪ

**೨೯.೦೬.೨೦೨೫ ಭಾನುವಾರ ಬೆಳಗ್ಗೆ ೧೦.೩೦ ಗಂಟೆಗೆ**
ಪ್ರೊ. ಗೋವಿಂದ ಜಾಲಿಹಾಳ ಸಂಗೀತ ಸ್ಪರ್ಧೆ
ಭಕ್ತಿಗೀತೆಗಳ ಗಾಯನ ಸ್ಪರ್ಧೆ

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 31-05-2025

ಭಾರತದ ಎತ್ತರಕ್ಕೆ ಇದನ್ನು ಎತ್ತಲು ಪ್ರಯತ್ನಿಸಿರುವುದು ಆಶ್ಚರ್ಯವನ್ನು ಹುಟ್ಟಿಸುವುದು. ಇಷ್ಟಾದರೂ, “ಇಂಥ ಬರವಣಿಗೆ ಕನ್ನಡ ಸಾಹಿತ್ಯದಲ್ಲಿ ಅಪೂರ್ವ” ಎಂಬ ಮಾತಂತೂ ಖಂಡಿತ ನಿಜ.

ಇಡೀ ಸಾಹಿತ್ಯ ಚರಿತ್ರೆಯ ಬರವಣಿಗೆ ಪಠ್ಯಪುಸ್ತಕ ಮಾದರಿಯದು; ನಿರೂಪಣೆ ಸಾಮಾನ್ಯ ಸ್ವರೂಪದ್ದು. ಕಾವ್ಯಗಳಿಂದ ತೆಗೆದು ನೀಡಿದ ಉದಾಹರಣ ಪದ್ಯಗಳದೇ ದೊಡ್ಡ ಪಾತ್ರ; ವಿವರಣೆಯದು ಕಡಿಮೆ ಪಾತ್ರ. ಆರಂಭದ ದಿನಗಳಲ್ಲಿ ನಮ್ಮ ಕವಿಗಳನ್ನೂ ಕಾವ್ಯಗಳನ್ನು ಸಹೃದಯ ಜಗತ್ತಿಗೆ ಪರಿಚಯಿಸುವುದು ಅಗತ್ಯವಿತ್ತು. ಅದನ್ನೂ ಒಂದು ಮಿತಿಯಲ್ಲಿ ಅದೂ ಅಪೂರ್ಣವಾಗಿ ಪೂರೈಸುವ ಕೆಲಸವನ್ನು ಅದು ಮಾಡಿದೆ. ಇದಕ್ಕಿಂತ ಹೆಚ್ಚಿನದನ್ನು ಅದರಿಂದ ನಿರೀಕ್ಷಿಸುವುದು ಅಗತ್ಯವಿಲ್ಲ. ಆದರೂ ಕಾಲಮಾನದ ದೃಷ್ಟಿಯಿಂದ ಅದಕ್ಕೊಂದು ಐತಿಹಾಸಿಕ ಮೌಲ್ಯವಿದೆಯೆಂಬುದನ್ನು ಮರೆಯಲಾಗದು.

(ಮುಂದುವರೆಯುವುದು)

ಪ್ರಕಟಣೆ

## ಭಕ್ತಿಗೀತೆ ಗಾಯನ ಸ್ಪರ್ಧೆ

ಬಿ.ಎಂ.ಶ್ರೀ. ಪ್ರತಿಷ್ಠಾನದ ‘ಗೋವಿಂದ ಜಾಲಿಹಾಳ ದತ್ತಿ’ಯಿಂದ ೧೩ ರಿಂದ ೧೮ ವರ್ಷಗಳ ಒಳಗಿನ ಯುವಕ ಯುವತಿಯರಿಗಾಗಿ ಭಕ್ತಿಗೀತೆ ಗಾಯನ ಸ್ಪರ್ಧೆಯನ್ನು ಪ್ರತಿಷ್ಠಾನದ ಎಂ.ವಿ.ಸೀ. ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನ ಮತ್ತು ಪ್ರಶಸ್ತಿಪತ್ರಗಳನ್ನು ನೀಡಲಾಗುವುದು. ಸ್ಪರ್ಧೆ ಜೂನ್ ೨೯ರಂದು ಬೆಳಗ್ಗೆ ೧೦.೩೦ ಗಂಟೆಗೆ ಉದ್ಘಾಟನೆಯೊಂದಿಗೆ ಪ್ರಾರಂಭವಾಗುತ್ತದೆ. ಸ್ಪರ್ಧೆಗಳು ಮುಕ್ತಾಯವಾದ ಮೇಲೆ ಸಮಾರೋಪ ಸಮಾರಂಭದಲ್ಲಿ ಬಹುಮಾನಗಳನ್ನು ಪ್ರದಾನ ಮಾಡಲಾಗುತ್ತದೆ.

ಸ್ಪರ್ಧಿಸಲು ಆಸಕ್ತಿ ಇರುವವರು ಹುಟ್ಟಿದ ತಾರೀಖಿನ ದಾಖಲೆಯೊಂದಿಗೆ ೨೫-೦೬-೨೦೨೫ರ ಒಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಪ್ರವೇಶ ಶುಲ್ಕ ಇರುವುದಿಲ್ಲ.

ಹೆಚ್ಚಿನ ವಿವರಗಳಿಗೆ ಪ್ರತಿಷ್ಠಾನದ ಕಛೇರಿಗೆ ಭೇಟಿ ನೀಡಬಹುದು ಅಥವಾ
ಮೊಬೈಲ್ ಸಂ. **೯೯೭೨೮೧೨೧೨೭**ನ್ನು ಸಂಪರ್ಕಿಸಬಹುದು

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004
Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭